ಶ್ರೀ ಕೆ. ವಿ. ಶಂಕರಗೌಡ.—ಹೌದು, ಎಷ್ಟೋ ಕಡೆಗಳಲ್ಲಿ ಭಾಗವಹಿಸಿಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಬೆಂಗಳೂರಿನಲ್ಲಿ ನಡೆದಂಥ ಸಮ್ಮೇಳನದಲ್ಲಿ ಸರ್ಕಾರದ ಅಧಿಕಾರಿಗಳು ಭಾಗವಹಿಸದಿರುವುದಕ್ಕೆ ಪ್ರಬಲವಾದಂಥ ಕಾರಣವೇನಾದರೂ ಇದೆಯೆ ?

ಶ್ರೀ ಕೆ. ವಿ. ಶಂಕರಗೌಡ.—ಪ್ರಬಲವಾದಂಥ ಕಾರಣಗಳು ಯಾವುದೂ ಇಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಮುಂದೆಯಾದರೂ ಖಾಸಗಿಯವರು ನಡೆಸತಕ್ಕಂಥ ಸಮ್ಮೇಳನಗಳಲ್ಲಿ ಸರ್ಕಾರದ ಅಧಿಕಾರಿಗಳು ಭಾಗವಹಿಸುವಂತೆ ಆದೇಶ ಕೊಡುವುದಕ್ಕೆ ಸರ್ಕಾರಕ್ಕೆ ಸಾಧ್ಯವೆ ?

ಶ್ರೀ ಕೆ. ವಿ. ಶಂಕರಗೌಡ.—ಇದು ಕಷ್ಟವಾದಂಥ ಪ್ರಶ್ನೆ. ಖಾಸಗಿಯವರು ಸಮ್ಮೇಳನ ಮಾಡುತ್ತೇವೆಂದು ಸರ್ಕಾರಕ್ಕೆ ತಿಳಿಸಿದರೆ, ಸರ್ಕಾರದ ಅಧಿಕಾರಿಗಳು ಹೋಗಬೇಕಾದರೆ ಟಿ.ಎ., ಡಿ.ಎ. ಅನ್ನು ಕೊಡಬೇಕಾಗುತ್ತದೆ. ಇದಕ್ಕೆ ಸರ್ಕಾರದ ಅನುಮತಿ ಬೇಕಾಗುತ್ತದೆ. ಸಮ್ಮೇಳನ ವನ್ನು ನಡೆಸುವುದರಿಂದ ಖಾಸಗಿಯವರಿಗೆ ಮತ್ತು ಸರ್ಕಾರಕ್ಕೆ ಏನಾದರೂ ಅನುಕೂಲವಾಗುತ್ತದೆಂದು ಸಮ್ಮೇಳನ ನಡೆಸುವವರು ಇನ್‌ವಿಟೇಷನ್ ಕೊಟ್ಟು ತಿಳಿಸಿದರೆ ಆಗ ಅಧಿಕಾರಿಗಳನ್ನು ಕಳಿಸುವುದಕ್ಕೆ ಏರ್ಪಾಡು ಮಾಡಬಹುದು. ಎಲ್ಲಾ ಕಡೆಗೂ ಸರ್ಕಾರದ ಅಧಿಕಾರಿಗಳು ಹೋಗಬೇಕೆಂದರೆ ತೊಂದರೆಯಾಗುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಈ ಸಮ್ಮೇಳನ ಬೆಂಗಳೂರಿನಲ್ಲಿಯೇ ನಡೆಯಿತು ಮತ್ತು ಇನ್‌ವಿಟೇಷನ್ ಸಹ ಕಳಿಸಲಾಗಿತ್ತು. ಆದರೂ ಸಹ ಸರ್ಕಾರದ ಅಧಿಕಾರಿಗಳು ಬಾರದಿರುವುದಕ್ಕೆ ಕಾರಣವೇನು ?

ಶ್ರೀ ಕೆ. ವಿ. ಶಂಕರಗೌಡ.—ಆಗಲೇ ತಿಳಿಸಿದ್ದೇನೆ. It is not obligatory on the part of officers to attend. Whether this is a registered body or a recognised body is not known. Moreover, it is a Board of management of the private institutions. In the absence of specific invitation and in the absence of specific instructions from Government, it is rather difficult for officers to participate in such meetings.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ರಿಜಿಸ್ಟ್ರೇಷನ್ ಆಫ್ ಸೊಸೈಟೀಸ್ ಆಕ್ಟ್ ಪ್ರಕಾರ ಬೆಂಗಳೂರಿನಲ್ಲಿ ಸಮ್ಮೇಳನ ನಡೆಸಿದಂಥ ಸಂಸ್ಥೆ ರಿಜಿಸ್ಟರ್ಡ್ ಸಂಸ್ಥೆಯಾಗಿದೆ ಮತ್ತು ವರ್ಷಾಂತರಗಳಿಂದ ಈ ರೀತಿ ಸಮ್ಮೇಳಗಳನ್ನು ನಡೆಸಿಕೊಂಡು ಬರುತ್ತಿದೆ. ಈ ಸಂಸ್ಥೆಯಲ್ಲಿ ಎಲ್ಲಾ ಅಧ್ಯಾಪಕ ವರ್ಗದ ಪ್ರತಿನಿಧಿಗಳೂ ಸಹ ಇದ್ದಾರೆ. ಇಂತಹ ಸಮ್ಮೇಳನಕ್ಕೆ ಸರ್ಕಾರದ ಅಧಿಕಾರಿಗಳು ಬರದೆ ವಕ್ರ ದೃಷ್ಟಿ ತೋರಿಸುವುದು ನ್ಯಾಯಕ್ಕೆ, ನ್ಯಾಯವೆ ?

ಶ್ರೀ ಕೆ. ವಿ. ಶಂಕರಗೌಡ.—ವಕ್ರದೃಷ್ಟಿ ಏನೂ ಇಲ್ಲ. ವಾಸ್ತವಿಕವಾಗಿ ಇನ್‌ವಿಟೇಷನ್ ಕೊಟ್ಟರೆ ಅಧಿಕಾರಿಗಳನ್ನು ಕಳಿಸಿಕೊಡಲಾಗುತ್ತದೆ.

## Sanction of Promotional Vacancies for Language Teachers

61. Sri M. P. L. SASTRY (Nominated).—

Will the Minister for Agriculture and Education be pleased to state :—

(*a*) whether promotional vacancies are sanctioned for the language teachers working in the Private Aided High Schools in the State ;

(*b*) whether there are any representations in this behalf ;

(*c*) if so, the action taken by the Government thereon ?

*A.*—Sri K. V. SHANKARA GOWDA (Minister for Agriculture and Education).—

(*a*) Yes.

(*b*) Yes.

(*c*) The Director of Public Instruction is taking action to award these grades to the eligible persons.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಸ್ವಾಮಿ, ನನ್ನ ಮೂರನೆಯ ಪ್ರಶ್ನೆಗೆ ಉತ್ತರವಾಗಿ ಅರ್ಹರಾದವರಿಗೆ ಈ ದರ್ಜೆಗಳಿಗೆ ಬಡ್ತಿ ಕೊಡುವ ಬಗ್ಗೆ ಶಿಕ್ಷಣ ಇಲಾಖೆಯ ಡೈರೆಕ್ಟರವರು ಕ್ರಮವನ್ನು ಕೈಗೊಳ್ಳುತ್ತಿದ್ದಾರೆಂದು ಹೇಳಿದ್ದೀರಿ, ಅಂದರೆ ಎಷ್ಟು ವರ್ಷ ಸರ್ವಿಸ್ ಮಾಡಿದ್ದಾರೆ ಅರ್ಹರಾದವರು ಎಂದು ಪರಿಗಣಿಸುತ್ತೀರಿ?

ಶ್ರೀ ಕೆ. ವಿ. ಶಂಕರಗೌಡ.—ನುಮಾರು 20 ವರ್ಷ ಸರ್ವಿಸ್ ಆಗಿದ್ದರೆ ಬಡ್ತಿಗೆ ಅರ್ಹರು ಎಂದು ತೀರ್ಮಾನ ಮಾಡಲಾಗುತ್ತದೆ.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—20 ವರ್ಷ ಸರ್ವಿಸ್ ಅದಮೇಲೆ ಬಡ್ತಿ ಕೊಟ್ಟರೆ, ಮುಂದಿನ ಹುದ್ದೆಯಲ್ಲಿರುವ ಕೊನೆಯ ಸಂಬಳವನ್ನು ಪಡೆಯಬೇಕಾದರೆ ನುಮಾರು 12 ವರ್ಷಗಳು ಬೇಕಾಗುತ್ತದೆ. ಅಷ್ಟರೊಳಗೆ ಇವರು ರಿಟೈರ್ ಆಗಿರುತ್ತಾರೆ. ಆದ್ದರಿಂದ ಹೊಸ ಹುದ್ದೆಯಲ್ಲಿರುವ ಗ್ರೇಡನ್ನು ಜಾಗ್ರತೆ ಪಡೆಯಲು ಈಗಿರತಕ್ಕಂಥ ಅವಧಿಯನ್ನು 15 ವರ್ಷಕ್ಕೆ ಕಡಿಮೆ ಮಾಡುವುದಕ್ಕೆ ಪ್ರಯತ್ನ ಕೊಡುತ್ತೀರಾ?

ಶ್ರೀ ಕೆ. ವಿ. ಶಂಕರಗೌಡ.—ಈ ಹುದ್ದೆಗಳನ್ನು ಹೊಸದಾಗಿ 1967ರಲ್ಲಿ ಮಾಡಿದ್ದು. ಈ ಬಗ್ಗೆ ಇರುವ ಸಾಧಕ ಬಾಧಕಗಳನ್ನು ನೋಡಿಕೊಂಡು, ಮಾನ್ಯ ಸದಸ್ಯರು ಹೇಳಿದಂಥ ನ್ಯೂನತೆಗಳು ಕಂಡುಬಂದರೆ, ಈಗಿನ ಬಡ್ತಿ ಅವಧಿಯನ್ನು ಪುನರ್ವಿಮರ್ಶೆ ಮಾಡುವುದಕ್ಕೆ ಏರ್ಪಾಡು ಮಾಡಲಾಗುತ್ತದೆ.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಭಾಷಾ ಶಿಕ್ಷಕರುಗಳ ಸಂಬಳ ಮತ್ತು ಪದವೀಧರರ ಸಂಬಳ ಎರಡೂ ಒಂದೇಆಗಿರುವುದರಿಂದ, ಈ ಬಗ್ಗೆ ಒಂದು ಕಾಮನ್ ಲಸ್ಟ್ ತಯಾರಿಸಿ 1:4 ಪ್ರಮೋಷನ್ ಕೊಡುವುದಕ್ಕೆ ಸಾಧ್ಯವೆ?

ಶ್ರೀ ಕೆ. ವಿ. ಶಂಕರಗೌಡ.—ಈಗ ರೇಷ್ಯೋ 1:5 ಇದೆ. ಮಾನ್ಯ ಸದಸ್ಯರು ಹೇಳಿದಂತೆ ಬದಲಾವಣೆ ಮಾಡಬೇಕಾದ ಅಗತ್ಯ ಕಂಡು ಬಂದರೆ ಮಾಡುತ್ತೇವೆ.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಸರ್ಕಾರೀ ಶಾಲೆಗಳಲ್ಲಿ ಒನ್-ಟು-ಫೋರ್ ಇದ್ದು ಖಾಸಗಿ ಶಾಲೆಗಳಲ್ಲಿ ಒನ್-ಟು-ಫೈವ್ ಮಾಡಿರುವುದು ಏತಕ್ಕೆ?

ಶ್ರೀ ಕೆ. ವಿ. ಶಂಕರಗೌಡ.—ಈಗ ಸರ್ಕಾರೀ ಶಾಲೆಗಳಲ್ಲೂ ಸಹ ಒನ್-ಟು-ಫೈವ್ ಇದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಈಗಿನ ಸರ್ಕಾರದ ಆಜ್ಞೆಯ ಪ್ರಕಾರ ಎಷ್ಟು ಜನರಿಗೆ ಬಡ್ತಿ ಸಿಗುತ್ತದೆ?

ಶ್ರೀ ಕೆ. ವಿ. ಶಂಕರಗೌಡ.—ಒನ್-ಟು-ಫೈವ್ ರೇಷ್ಯೋ ಪ್ರಕಾರ 20 ಪರ್‌ಸೆಂಟ್ ಜನರಿಗೆ ಅನುಕೂಲವಾಗುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಇಡೀ ಖಾಸಗೀ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕಂಥ ಅಧ್ಯಾಪಕವರ್ಗದವರ ಪೈಕಿ ಈಗಿನ ಸರ್ಕಾರದ ಆಜ್ಞೆಯ ಪ್ರಕಾರ ಹೆಚ್ಚಿನ ಜನರಿಗೆ ಅನುಕೂಲ ದೊರೆಯುತ್ತಿಲ್ಲವೆಂಬುದು ಗೊತ್ತಿದೆಯೆ?

ಶ್ರೀ ಕೆ. ವಿ. ಶಂಕರಗೌಡ.—100ಕ್ಕೆ 20 ಜನರಿಗೆ ಸೌಲಭ್ಯ ದೊರಕುತ್ತದೆ. ಒಟ್ಟು ಎಷ್ಟು ಜನರಿಗೆ ಸಿಕ್ಕುತ್ತದೆಂಬುದನ್ನು ಲೆಕ್ಕ ಹಾಕಿಲ್ಲ.

Mr. CHAIRMAN.—All the other questions will lapse. But Question No. 59 will be taken up tomorrow.